ಜನ ಕೇಳಲಿಲ್ಲ.

'ಕಾರಂತರು ಊರು ತಕ್ಷಣ ಬಿಡಬೇಕು' ಎಂದರು ಕೆಲವರು. 'ಅವರು ಊರು ಬಿಡದಿದ್ದರೆ ನಾವು ಅವರನ್ನು ಓಡಿಸಬೇಕು' ಎಂದರು ಇನ್ನು ಹಲವರು.

ಸಂಜಯ್ ಸ್ತಬ್ಧನಾದ. ಈ ಪ್ರತಿಕ್ರಿಯೆಯನ್ನು ಅವನು ನಿರೀಕ್ಷಿಸಿರಲಿಲ್ಲ. ಒಂದು ಕ್ಷಣ ನಿಂತು ಯೋಚಿಸಿದ. ಇನ್ನು ಇಲ್ಲಿರುವುದು ಕಷ್ಟ ಎಂದು ಅವನಿಗೆ ಅನಿಸತೊಡಗಿತು. ಆದರೂ ಶಾಸ್ತ್ರಿಗಳನ್ನು ಬಿಟ್ಟು ಹೊರಡಲು ಮನಸ್ಸು ಒಪ್ಪಲಿಲ್ಲ. ಅವನು ಮನೆಯ ಒಳಗೆ ನಡೆದ. ಶಾಸ್ತ್ರಿಗಳ ದೇವರ ಕೋಣೆಗೆ ಹೋಗಿ ದೀಪ ಹಚ್ಚಿದ. ಅಷ್ಟರಲ್ಲಿ ಅಲ್ಲಿಗೆ ಆಶಾ ಬಂದಳು.

ಸಂಜಯ್ ದೇವರಿಗೆ ಕೈಮುಗಿದು ಶಾಸ್ತ್ರಿಗಳನ್ನು ರಕ್ಷಿಸಲು ಪ್ರಾರ್ಥಿಸಿದ. ಹಾಗೇ ಹಿಂದೆ ತಿರುಗಿ ಆಶಾಳನ್ನು ನೋಡಿ ಕೈಮುಗಿಯುತ್ತಾ – 'ಆಶಾ, ನನ್ನಿಂದ ತಪ್ಪಾಗಿದೆ... ನನಗೆ ಸೀತಾಪುರದಲ್ಲಿ ಹೀಗಾಗುತ್ತದೆ ಎಂದು ಗೊತ್ತಿರಲಿಲ್ಲ. ಕ್ಷಮಿಸು' ಅಂದ. ಆಶಾ ಮಾತಾಡಲಿಲ್ಲ. ಅವಳ ಕಣ್ಣಲ್ಲಿ ನೀರು ಬಂತು.

ಅಲ್ಲಿಂದ ಸಂಜಯ್ ನೇರವಾಗಿ ಶಾಸ್ತ್ರಿಗಳು ಮಲಗಿದ್ದ ರೂಮಿಗೆ ನಡೆದ. ಆದರೆ ಆ ಕೋಣೆಯ ಕಿಟಕಿ ಮುಚ್ಚಿತ್ತು. ಹಗಲಲ್ಲೂ ಕತ್ತಲೆ ಆವರಿಸಿತ್ತು. ಸೀತಮ್ಮ ಶಾಸ್ತ್ರಿಗಳ ಸಮೀಪ ಕುಳಿತಿದ್ದರು. ಶಾಸ್ತ್ರಿಗಳು ಹಾಸಿಗೆಯಲ್ಲಿ ಮಲಗಿದ್ದರು.

'ಶಾಸ್ತ್ರಿಗಳೇ...' ಎನ್ನುತ್ತಾ ಸಂಜಯ್ ಶಾಸ್ತ್ರಿಗಳಿಗೆ ಅಡ್ಡ ಬಿದ್ದ. ಶಾಸ್ತ್ರಿಗಳಿಗೆ ಅದು ಗೊತ್ತಾಗಲಿಲ್ಲ. ಸೀತಮ್ಮ 'ಏನೋ ಇದು' ಅನ್ನುತ್ತಾ ಸಂಜಯ್‌ನನ್ನು ರೂಮಿನಿಂದ ಹೊರಗೆ ಕರಕೊಂಡು ಬಂದರು.

'ನನ್ನಿಂದ ತಪ್ಪಾಯಿತಮ್ಮ' ಸಂಜಯ್ ಕಣ್ಣಲ್ಲಿ ನೀರು ಇಳಿಸಿಕೊಂಡು ಹೇಳಿದ. 'ಶಾಸ್ತ್ರಿಗಳಿಗೆ ಜ್ವರ ಬರಲು ನಾನೇ ಕಾರಣನಾದೆ' ಎಂದ. ಅಷ್ಟರಲ್ಲಿ ಅವನ ಸ್ವರ ನಡುಗುತ್ತಿತ್ತು.

'ಹುಚ್ಚು ಹುಡುಗ, ಆಗುವುದನ್ನು ಯಾರಿಂದಲೂ ತಪ್ಪಿಸಲು ಆಗ್ತದಾ ಹೇಳು' ಎಂದರು ಸೀತಮ್ಮ. ಶಾಸ್ತ್ರಿಗಳು ಒಳಗಿನಿಂದ ಕೆಮ್ಮಿದರು. ಅವರನ್ನು ನೋಡಲು ಸೀತಮ್ಮ ಮತ್ತೆ ಒಳಗೆ ಹೋದರು. ಸಂಜಯ್ ರೂಮಿನ ಕತ್ತಲೆಯಲ್ಲಿ ನಿಂತು ಬಿಕ್ಕಿ ಬಿಕ್ಕಿ ಅತ್ತ. ನಂತರ ತನ್ನ ಬ್ಯಾಗ್ ಪ್ಯಾಕ್ ಮಾಡಿ ಮನೆಯಿಂದ ಹೊರಗೆ ಕಾಲಿಟ್ಟ.

ಅವನಿಗೆ ಮಾದ ಇದಿರಾದ. ಸಂಜಯ್ ಮಾದನಿಗೆ ಕೈಮುಗಿದು, 'ಇನ್ನು ಶಾಸ್ತ್ರಿಗಳು ನಿನ್ನ ಕೈಯಲ್ಲಿ' ಎಂದ. ಮಾದನಿಗೆ ಅರ್ಥವಾಗಲಿಲ್ಲ.

ಶೆಟ್ಟರು ಮತ್ತು ಆನಂದಣ್ಣ ಜನರನ್ನು ಶಾಂತ ಮಾಡುತ್ತಾ ನಿಂತಿದ್ದರು. ಶಾಸ್ತ್ರಿಗಳ ಮೇಲಿದ್ದ ಜನರ ಪ್ರೀತಿ ಸಂಜಯನ ಮೇಲಿನ ದ್ವೇಷವಾಗಿ ತಿರುಗಿತ್ತು. ಶೆಟ್ಟರು ಜನರಿಗೆ ಕೈಮುಗಿಯುತ್ತಾ ಎಲ್ಲವೂ ಸರಿಯಾಗುತ್ತದೆ ಎಂದು ಹೇಳುತ್ತಿದ್ದರು. ಆನಂದಣ್ಣ ದೇವಸ್ಥಾನದ ಕಡೆಗೆ ಕೈಮಾಡುತ್ತಾ ದೇವರ ಮೇಲೆ ಭಾರ ಹಾಕೋಣ, ಎಲ್ಲಾ ಸರಿ ಹೋಗುತ್ತದೆ ಎನ್ನುತ್ತಿದ್ದರು.

ಸಂಜಯ್ ಅವರಿಗೆ ದೂರದಲ್ಲೇ ಕೈಮುಗಿದ. ಅವರ ಪ್ರತಿಕ್ರಿಯೆಗೆ ಕಾಯಲಿಲ್ಲ. ಸವಣೂರಿನ ಕಡೆಗೆ ಮುಖ ಮಾಡಿದ. ಅವನಿಗೆ ಈಗ ಸೀತಾಪುರದ ಹುಲಿಗಳಾಗಲಿ, ಹಂದಿಗಳಾಗಲಿ ಇದಿರಾಗುತ್ತವೆ ಎಂಬ ಭಯ ಇರಲಿಲ್ಲ. ಸಂಜಯ್ ಗುಡ್ಡದ ತುದಿ ತಲುಪುವ ವೇಳೆಗೆ ಸೂರ್ಯ ಇದಾವುದರ ಪರಿವೆಯಿಲ್ಲದಂತೆ ಪಶ್ಚಿಮ ದಿಕ್ಕಿನಲ್ಲಿ ಮುಳುಗುತ್ತಿದ್ದ. ಸಂಜಯ್ ಗುಡ್ಡದ ಕಲ್ಲಿನ ಮೇಲೆ ಕುಳಿತು ಸೀತಾಪುರವನ್ನೊಮ್ಮೆ ತಿರುಗಿ ನೋಡಿದ. ಅವನ ಕಣ್ಣು ತುಂಬಿ ಬಂತು. ತಲೆ ತಿರುಗಿದಂತಾಯ್ತು.

ಗುಡ್ಡದ ಮೇಲಿನ ಟವರ್ ಅನ್ನು ನೋಡಿದ. ಟವರ್‌ನ ಕಂಬಗಳನ್ನು ಸರ್ಪಗಳ ಆಕಾರದ ವೈರಸ್‌ಗಳು ಸುತ್ತಿಕೊಂಡಂತೆ ಕಂಡಿತು. ತನ್ನ ಕುತ್ತಿಗೆಯನ್ನು ಮುಟ್ಟಿ ಅಲ್ಲಿ ಹರ್ಪಿಸ್ ಪುನಃ ಬಂದಿದೆಯೋ ನೋಡಿದ.

ದೂರದ ಪೊದರಿನಲ್ಲಿ ಆಶಾ ಎಳೆ ಚಿಗುರುಗಳನ್ನು ಕೀಳುತ್ತಿರುವ ಹಾಗೆ ಕಂಡಿತು. ನೋಡನೋಡುತ್ತಿದ್ದಂತೆ ಆಶಾ ನವ್ಯಳಾಗಿ ಬದಲಾಗಿ ಎಳೆ ಚಿಗುರುಗಳು ಮೈಕ್‌ಗಳಾಗಿ, ಗಿಡ ಮರಗಳು ಪ್ರೇಕ್ಷಕರಾಗಿ ಕಾಣತೊಡಗಿದವು. ಕಣ್ಣನ್ನು ಒರೆಸಿಕೊಂಡು ನೋಡಿದರೆ ಆಶಾಳೂ ನವ್ಯಾಳೂ ಕಾಣಲಿಲ್ಲ.

ಸಂಜಯನಿಗೆ ಅವನ ಅಜ್ಜನ ಹಾಗೂ ಅಪ್ಪನ ನೆನಪಾಗಿ ಗಂಟಲು ಕಟ್ಟಿ ಬಂತು. ಶಾಸ್ತ್ರಿಗಳನ್ನು ಗಟ್ಟಿಯಾಗಿ ತಬ್ಬಿಕೊಳ್ಳಬೇಕೆಂದು ಅನಿಸಿತು. ಸಮಯವನ್ನು ಹಿಡಿದಿಟ್ಟು ಹಿಂದೆ ತಿರುಗಿಸಬೇಕೆಂದು ಅನಿಸಿತು. ಆಗ ಪ್ರಭಾಕರ ಔಷಧ ತರಲು ಸವಣೂರಿಗೆ ಹೋದದ್ದು ನೆನಪಾಗಿ ಕಲ್ಲಿನ ಮೇಲೆ ಹತ್ತಿ ಒಮ್ಮೆ ಸವಣೂರಿನ ಕಡೆ ನೋಡಿದ. ಒಮ್ಮೆ ಸೀತಾಪುರದ ಕಡೆ ನೋಡಿದ. ಯಾರೂ ಕಾಣಲಿಲ್ಲ.

ಸೂರ್ಯ ಈಗಾಗಲೇ ಮುಳುಗಿಯಾಗಿತ್ತು. ದೂರದಲ್ಲಿ ಹಂದಿಯ ಗುಟುರು ಕೇಳುತ್ತಿತ್ತು. ಸಂಜಯನಿಗೆ ತಾನಿರುವ ಸ್ಥಳದ ಅರಿವಾಗಿ ಬೇಗ ಬೇಗನೆ ಸವಣೂರಿನ ಕಡೆಗೆ ಇಳಿಯತೊಡಗಿದ.

ಸಂಜಯ್ ಹೊರಡುವುದರೊಂದಿಗೆ ಸೀತಾಪುರದ ಸೋಶಿಯಲ್ ಮೀಡಿಯಾದ ಮಿಡಿತಗಳು ನಿಂತುಹೋದವು. ಇಡೀ ಸೀತಾಪುರದಿಂದ ಯಾರೂ ಯಾವ ಸುದ್ದಿಯೂ ಪ್ರಕಟಮಾಡುವುದನ್ನು ನಿಲ್ಲಿಸಿಬಿಟ್ಟರು. ಜಗತ್ತಿನಾದ್ಯಂತದ ಮಂದಿ ಸೀತಾಪುರದ ಬಗ್ಗೆ, ಶಾಸ್ತ್ರಿಗಳ ಆರೋಗ್ಯದ ಬಗ್ಗೆ ತಿಳಿಯ ಬಯಸಿತು. ಆದರೆ ಸೀತಾಪುರ ಹೊರಪ್ರಪಂಚಕ್ಕೆ ಸಂಪೂರ್ಣ ಮೌನವಾಯಿತು.

ಇದಾಗಿ ಎರಡು ದಿನದಲ್ಲಿ ಸಂಜಯ್ ಮುಂಬೈ ತಲುಪಿದ. ಆದರೆ ಪ್ರತೀ ಕ್ಷಣದಲ್ಲೂ ಅವನ ಮನಸ್ಸಿನಲ್ಲಿ ಸೀತಾಪುರವಿತ್ತು. ಶಾಸ್ತ್ರಿಗಳ ಬಗ್ಗೆ ಅವರ ಯೋಗಕ್ಷೇಮದ ಬಗ್ಗೆ ಆತ ಆಲೋಚಿಸುತ್ತಿದ್ದ. ಆದರೆ ಸೀತಾಪುರದಿಂದ ಯಾವ ಸುದ್ದಿಯೂ ಅವನಿಗೆ ಬರುತ್ತಿರಲಿಲ್ಲ.

ಮುಂಬೈಗೆ ಬಂದ ಸಂಜಯ್ ಅಲ್ಲಿ ಸೀತಾಪುರದ ನ್ಯೂಸ್‌ಗಾಗಿ ಕಾದು ಕುಳಿತ. ಒಂದು ವಾರ ಕಳೆದರೂ ಸೀತಾಪುರದ ಯಾವ ಸುದ್ದಿಯೂ ಬರಲಿಲ್ಲ. ಆದರೆ ಸಂಜಯ್ ಸೀತಾಪುರದ ಹಲವಾರು ಜನಕ್ಕೂ ಆಶಾಳಿಗೂ, ಪ್ರಭಾಕರನಿಗೂ ಮೆಸೇಜ್‌ಗಳನ್ನು ಕಳುಹಿಸುತ್ತಲೇ ಹೋದ. 'ಶಾಸ್ತ್ರಿಗಳು ಹೇಗಿದ್ದಾರೆ?' ಎಂದು ವಿಚಾರಿಸುತ್ತಿದ್ದ. ಆದರೆ ಯಾವ ಉತ್ತರವೂ ಬರಲಿಲ್ಲ. ಹಲವಾರು ಜನರಿಗೆ ಫೋನ್ ಮಾಡಿ ನೋಡಿದ. ಯಾರೂ ಫೋನ್ ಸ್ವೀಕರಿಸುತ್ತಿರಲಿಲ್ಲ.

ಈ ನಡುವೆ ಮುಂಬೈಯಲ್ಲಿ ಕೊರೊನಾ ಜೋರಾಗಿ ಹಬ್ಬತೊಡಗಿತ್ತು. ತಾನು ಮುಂಬೈಯಲ್ಲಿ ಕುಳಿತರೆ ಯಾವ ಪ್ರಯೋಜನವಿಲ್ಲ ಎಂದು ಸಂಜಯನಿಗೆ ಅನಿಸಿತು. ಅಮೆರಿಕಕ್ಕೆ ಹಿಂದೆ ಹೋಗಲು ವಿಮಾನದ ಟಿಕೆಟ್ ಬುಕ್ ಮಾಡಿದ. ಆತ ಅಮೆರಿಕಕ್ಕೆ ಮರಳುವ ದಿನವೂ ಬಂತು. ಬೆಳಗ್ಗೆ ಎದ್ದವನೇ ಪುನಃ ಸೀತಾಪುರದ ಎಲ್ಲರಿಗೂ ಮೆಸೇಜ್ ಮಾಡಿದ. ಫೋನ್ ಮಾಡಿದ. ಎಂದಿನಂತೆ ಯಾರೂ ಫೋನ್ ಸ್ವೀಕರಿಸಲಿಲ್ಲ. ಮೆಸೇಜ್‌ಗೆ ಉತ್ತರ ಕೊಡಲಿಲ್ಲ.

ಅಮೆರಿಕದ ವಿಮಾನ ಪ್ರವೇಶಿಸಿ ಸಂಜಯ್ ಕುಳಿತ. ಗಗನಸಖಿಯಿಂದ ವಿಮಾನ ಹೊರಡುವ ಪ್ರಕಟಣೆಯೊಂದಿಗೆ ಸೆಲ್ ಫೋನ್ ಬಂದ್ ಮಾಡಲು ಆಜ್ಞೆಯಾಯಿತು. ಸೆಲ್ ಫೋನ್ ಸ್ವಿಚ್ ಆಫ್ ಮಾಡಲು ಮುಂದಾದ ಸಂಜಯನಿಗೆ ಎಲ್ಲಾ ಸೋಶಿಯಲ್ ಮೀಡಿಯಾ ಸೈಟ್‌ಗಳಲ್ಲಿ ಬಿತ್ತರವಾಗುತ್ತಿದ್ದ ಒಂದು ಮೆಸೇಜ್ ಕಾಣಿಸಿತು.

ಅದು ಪ್ರಭಾಕರನ ಮೆಸೇಜ್ ಆಗಿದ್ದು, 'ಶಾಸ್ತ್ರಿಗಳು ಸೌಖ್ಯವಾಗಿದ್ದಾರೆ' ಎಂದಿತ್ತು.

ಸಾವಿರಾರು ಜನ ಆ ಮೆಸೇಜ್ ಅನ್ನು ಲೈಕ್ ಮಾಡುತ್ತಿದ್ದರು. ಸ್ವಲ್ಪ ಜನ ಇದು ಆಯುರ್ವೇದದ ವಿಜಯ ಎಂದು ಕಾಮೆಂಟ್ ಮಾಡಿದರೆ, ಕೆಲವರು 'ಪ್ರಭಾಕರ ಆಧುನಿಕ ಔಷಧ ತಂದಿರಬಹುದು, ಧನ್ಯವಾದ ಪ್ರಭಾಕರ್' ಅಂದರು.

ಕೆಲವರು 'ಇದೆಲ್ಲಾ ನಾಟಕ, ಸೋಶಿಯಲ್ ಮೀಡಿಯಾ ಪ್ರಚಾರಕ್ಕಾಗಿ ಮಾಡಿದ್ದಾರೆ' ಅಂದರು. ಪ್ರಭಾಕರನನ್ನು ನಂಬಲು ಸಾಧ್ಯವಿಲ್ಲ... ಅವನು 'ಒಂದು ಹಳ್ಳಿ ಎರಡು ತಿಂಗಳು' ಕಾರ್ಯಕ್ರಮ ಮುಂದುವರೆಸಿಕೊಂಡು ಹೋಗುತ್ತಿದ್ದಾನೆ' ಅಂದರು.

ಇನ್ನು ಕೆಲವರು 'ಕೊರೊನಾ ವೈರಸ್ ಸೀತಾಪುರಕ್ಕೆ ಹೋಗಿರಲಿಕ್ಕಿಲ್ಲ... ಇದು ಕೊರೊನಾವೇ ಅಲ್ಲ' ಎಂದರೆ, ಉಳಿದವರು 'ಇಲ್ಲ, ವೈರಸ್ ಖಂಡಿತ ಇನ್ನೂ ಸೀತಾಪುರದಲ್ಲಿದೆ. ಸ್ವಲ್ಪ ದಿನದಲ್ಲಿ ನೋಡಿ ಏನಾಗುತ್ತದೆ' ಅಂದರು.

ಕೆಲವರು ಸಂಜಯನಿಗೆ ಟ್ಯಾಗ್ ಮಾಡುತ್ತಾ 'ಸರ್, ನೀವೇ ಹೇಳಿ, ಸೀತಾಪುರ ಹೇಗಿದೆ? ಶಾಸ್ತ್ರಿಗಳು ಗುಣವಾಗಿದ್ದಾರಾ? ಅಲ್ಲಿ ಕೊರೊನಾ ಇದೆಯೇ?' ಎಂಬಿತ್ಯಾದಿ ಪ್ರಶ್ನೆ ಕೇಳಲು ಶುರು ಮಾಡಿದರು. ಸಂಜಯ್ ಇದನ್ನೆಲ್ಲಾ ಓದುತ್ತಿದ್ದಾಗ ಗಗನಸಖಿ ಅಲ್ಲಿಗೆ ಬಂದು 'ಸರ್, ನಿಮಗೆ ಈಗಾಗಲೇ ಎರಡು ಬಾರಿ ಹೇಳಿದೆ... ಸೆಲ್ ಫೋನ್ ಮುಚ್ಚಿ... ಪ್ಲೀಸ್...' ಎಂದು ಹೇಳಿದಳು.

ಸಂಜಯ್ ಸೆಲ್ ಫೋನ್ ಬಂದ್ ಮಾಡುತ್ತಾ ಕಣ್ಣುಗಳನ್ನು ಮುಚ್ಚಿಕೊಂಡ.

(ಮುಗಿಯಿತು)

ಪ್ರತಿಕ್ರಿಯಿಸಿ: feedback@sudha.co.in